JULY 04, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **ಚಿಕ್ಕ ಮಕ್ಕಳಲ್ಲಿ ಹೃದಯಾಘಾತ; ಹುಬ್ಬಳ್ಳಿಯ ಕೆ.ಎಂ.ಸಿ., ಆರ್.ಐ. ವೈದ್ಯರಿಂದ ಮಹತ್ವದ ಸಂಶೋಧನೆ.**
- **ಒಣ ಮೆಣಸಿನಕಾಯಿ ಬೆಳೆದ, ರೈತರ ಹಿತಕಾಯಲು, ಬೆಂಬಲ ಬೆಲೆ ನಿಗದಿ ಪಡಿಸಿದ, ಸರ್ಕಾರ.**
- **ಇಂದು ಬೆಳಗಾವಿಯಲ್ಲಿ, ವಿಶ್ವೇಶ್ವರಾಯ ತಾಂತ್ರಿಕ ವಿಶ್ವವಿದ್ಯಾಲಯದ, 25ನೇ ಘಟಿಕೋತ್ಸವ.**
- **ಖೇಲೋ ಭಾರತ್ ನೀತಿ; ಅನಿವಾಸಿ ಭಾರತೀಯ ಕ್ರೀಡಾಪಟುಗಳು, ಭಾರತವನ್ನು ಪ್ರತಿನಿಧಿಸಲು, ಅವಕಾಶ.**

<><><>

**ಈಗ ವಾರ್ತೆಗಳ ವಿವರ**

<><><>

**ಹುಬ್ಬಳ್ಳಿಯ ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಸಂಶೋಧನಾ ಕೇಂದ್ರ – ಕೆ.ಎಂ.ಸಿ., ಆರ್.ಐ. ವೈದ್ಯರು, ಸಂಶೋಧನೆ ಕೈಗೊಂಡಿದ್ದು, ಚಿಕ್ಕ ಮಕ್ಕಳ ಹೃದಯಾಘಾತಕ್ಕೆ ದೈಹಿಕ ಶ್ರಮದ ಕೊರತೆ, ಸ್ಥೂಲಕಾಯ ಹಾಗೂ ಅತಿಯಾದ ಮೊಬೈಲ್ ಬಳಕೆ ಕಾರಣ ಎಂದು, ವರದಿ ತಿಳಿಸಿದೆ. ಧಾರವಾಡ ಜಿಲ್ಲೆಯ 6 ಶಾಲೆಗಳ, 8 ಮತ್ತು 9ನೇ ತರಗತಿ ಓದುತ್ತಿರುವ, ತೂಕ ಹೆಚ್ಚಿರುವ 30 ವಿದ್ಯಾರ್ಥಿಗಳನ್ನು, ತಪಾಸಣೆಗೆ ಒಳಪಡಿಸಿದಾಗ, 26 ವಿದ್ಯಾರ್ಥಿಗಳ ದೇಹದಲ್ಲಿ ಅಸಹಜ ಬೆಳವಣಿಗೆ ಗುರುತಿಸಲಾಗಿದೆ.**

<><><>

**ಇಡೀ ದೇಶದಲ್ಲಿ ಪ್ರಥಮ ಬಾರಿಗೆ ಇಂತಹ ಸಂಶೋಧನೆ ಕೈಗೊಳ್ಳಲಾಗಿದೆ ಎಂದು, ಕೆ.ಎಂ.ಸಿ., ಆರ್.ಐ. ಆಸ್ಪತ್ರೆಯ, ಬಹು ವಿಭಾಗೀಯ ಸಂಶೋಧನಾ ಘಟಕದ ನೋಡಲ್ ಅಧಿಕಾರಿ, ಡಾಕ್ಟರ್ ರಾಮ ಕೌಲಗುಡ್ಡ ತಿಳಿಸಿದ್ದಾರೆ.**

**<><><>**

**ಡಾಕ್ಟರ್ ರಾಮ ಕೌಲಗುಡ್ಡ ಧ್ವನಿ 55 ಸೆಕೆಂದುಗಳು**

**<><><>**

ಒಣ ಮೆಣಸಿನಕಾಯಿ ಬೆಳೆದ ರೈತರು ಸಂಕಷ್ಟದಲ್ಲಿದ್ದು, ಪ್ರತಿ ಕ್ವಿಂಟಾಲ್‌ಗೆ, **10** ಸಾವಿರದ **5** ನೂರಾ **89** ರೂಪಾಯಿ, **20** ಪೈಸೆಯಂತೆ, ಮಾರುಕಟ್ಟೆ ಮಧ್ಯಪ್ರವೇಶ ದರ ನಿಗದಿ ಪಡಿಸಿ, ಸರ್ಕಾರ ಆದೇಶ ಹೊರಡಿಸಿದೆ. ಬಳ್ಳಾರಿ, ಗದಗ, ಧಾರವಾಡ, ಬಾಗಲಕೋಟೆ, ರಾಯಚೂರು, ವಿಜಯಪುರ, ಯಾದಗಿರಿ, ಚಿತ್ರದುರ್ಗ, ತುಮಕೂರು, ಕಲಬುರ್ಗಿ, ವಿಜಯನಗರ, ಹಾವೇರಿ ಹಾಗೂ ಕೊಪ್ಪಳ ಜಿಲ್ಲೆಗಳಲ್ಲಿ, **2024–25** ನೇ ಸಾಲಿನಲ್ಲಿ, ಒಣ ಮೆಣಸಿನಕಾಯಿ ಬೆಳೆದ ರೈತರು, ಪ್ರಯೋಜನ ಪಡೆಯಬಹುದು. ಫ್ರುಟ್ಸ್ ತಂತ್ರಾಂಶದಲ್ಲಿ ಹೆಸರು ನೋಂದಾಯಿಸುವಂತೆ, ಕರ್ನಾಟಕ ರಾಜ್ಯ ಸಂಬಾರು ಪದಾರ್ಥಗಳ ಅಭಿವೃದ್ಧಿ ಮಂಡಳಿ, ಕೋರಿದೆ.

<><><>

ಕೇಂದ್ರ ಪುರಸ್ಕೃತ, ಪ್ರಧಾನಮಂತ್ರಿ ಸೂರ್ಯಘರ್ ಯೋಜನೆಯಡಿ, ಉಡುಪಿ ಜಿಲ್ಲೆಯಲ್ಲಿ, ಮಾದರಿ ಸೌರ ವಿದ್ಯುತ್ ಸ್ವಾವಲಂಬಿ, ಐದು ಗ್ರಾಮಗಳನ್ನು ರೂಪಿಸಲು, ಆಯ್ಕೆ ಮಾಡಲಾಗಿದೆ. ಕೋಟತಟ್ಟು, ಕಿರಿಮಂಜೇಶ್ವರ, ಮಜೂರು, ನಿಟ್ಟೆ ಹಾಗೂ ಉಪ್ಪೂರು ಗ್ರಾಮಗಳನ್ನು ಆಯ್ಕೆ ಮಾಡಲಾಗಿದ್ದು, ಸೌರ ವಿದ್ಯುತ್ ಯೋಜನೆ ಅಡಿ, ಡಿಸೆಂಬರ್ ಅಂತ್ಯದ ವರೆಗೆ, ಎಲ್ಲ ಸ್ಪರ್ಧೆಗಳನ್ನು ನಡೆಸಲು, ಜಿಲ್ಲಾ ಮಟ್ಟದ ಸಭೆಯಲ್ಲಿ ತೀರ್ಮಾನಿಸಲಾಗಿದೆ ಎಂದು, ಮೆಸ್ಕಾಂ ತಿಳಿಸಿದೆ.

<><><>

ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ, ಮಧ್ಯಸ್ಥಿಕೆ ಮೂಲಕ, ಅಕ್ಟೋಬರ್ 7ರ ವರೆಗೆ, ಒಟ್ಟು **90** ದಿನಗಳಲ್ಲಿ, ರಾಜೀ ಸಂಧಾನಕ್ಕೆ ಯೋಗ್ಯವಾದ ಪ್ರಕರಣಗಳನ್ನು, ವಿಲೇವಾರಿ ಮಾಡಲಾಗುವುದು ಎಂದು, ರಾಮನಗರ ಜಿಲ್ಲೆ, ಹಿರಿಯ ಸಿವಿಲ್ ನ್ಯಾಯಾಧೀಶರಾದ, ಪಿ.ಆರ್. ಸವಿತಾ ತಿಳಿಸಿದ್ದಾರೆ. ಅಪಘಾತ ಪ್ರಕರಣ, ವೈವಾಹಿಕ, ಕೌಟುಂಬಿಕ ದೌರ್ಜನ್ಯ, ಭೂ ಸ್ವಾಧೀನ ಹಾಗೂ ಸಿವಿಲ್ ಪ್ರಕರಣ ಸೇರಿದಂತೆ, ಕಕ್ಷಿದಾರರ ಸಮಕ್ಷಮ, ವಾರದ 7 ದಿನ, ಈ ಪ್ರಕ್ರಿಯೆ ನಡೆಯುತ್ತದೆ, ಎಂದರು.

<><><>

ಚಾಮರಾಜನಗರ ತಾಲೂಕು, ಯಣಗುಂಬ ಗ್ರಾಮದಲ್ಲಿ **10**ನೇ ಶತಮಾನದ ಶಾಸನ ಪತ್ತೆಯಾಗಿದೆ. ಗೋ ರಕ್ಷಣೆಗಾಗಿ ನಡೆದ ಕಾಳಗದ ಉಲ್ಲೇಖ, ಕನ್ನಡ ಹಾಗೂ ತಮಿಳು ಭಾಷೆಯಲ್ಲಿದೆ. ಗ್ರಾಮದ ರೈತ ಮಂಜುನಾಥ ಅವರು, ಕೇಂದ್ರ ಪುರಾತತ್ವ ಇಲಾಖೆ ಗಮನ ಸೆಳೆದಿದ್ದಾರೆ. **3** ತಮಿಳು, **5** ಕನ್ನಡ ಶಾಸನಗಳು, ವೀರಗಲ್ಲುಗಳೂ ಪತ್ತೆಯಾಗಿವೆ.

<><><>

ಈಗ ಪ್ರಕಟಣೆ,
ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..
**(1 ನಿ. 04 ಸೆ.)**

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ **x** ಖಾತೆ **@airnews_dharwad** ಹಾಗೂ

ನಮ್ಮ ಫೇಸ್ಬುಕ್ ಖಾತೆ **Airrnu Dharwad** ಅನುಸರಿಸಿ.

<><><>

ಬೆಳಗಾವಿಯ, ವಿಶ್ವೇಶ್ವರಾಯ ತಾಂತ್ರಿಕ ವಿಶ್ವವಿದ್ಯಾಲಯದ, 25ನೇ ವಾರ್ಷಿಕ ಘಟಿಕೋತ್ಸವ, ಇಂದು ಬೆಳಗ್ಗೆ 11 ಗಂಟೆಗೆ, ವಿಶ್ವವಿದ್ಯಾಲಯದ ಸಭಾಗೃಹದಲ್ಲಿ ಜರುಗಲಿದೆ. ಇಸ್ರೋ ಅಧ್ಯಕ್ಷ ವಿ. ನಾರಾಯಣ, ಎಕ್ಸೆಲ್ ಇಂಡಿಯಾ ಸಂಸ್ಥಾಪಕ, ಪ್ರಶಾಂತ ಪ್ರಕಾಶ, ಬೆಂಗಳೂರಿನ ಎಟ್ರಿಯಾ ವಿಶ್ವವಿದ್ಯಾಲಯದ ಕುಲಾಧಿಪತಿ ಸಿ.ಎಸ್. ಸುಂದರರಾಜ್ ಅವರಿಗೆ, ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಅವರು, ಡಾಕ್ಟರ್ ಆಫ್ ಸೈನ್ಸ್ ಪದವಿ ಪ್ರದಾನ ಮಾಡುವರು ಎಂದು, ಉಪ ಕುಲಪತಿ ವಿದ್ಯಾಶಂಕರ ತಿಳಿಸಿದ್ದಾರೆ. ಉನ್ನತ ಶಿಕ್ಷಣ ಖಾತೆ ಸಚಿವ ಎಂ.ಸಿ. ಸುಧಾಕರ, ಕೇಂದ್ರ ಸರ್ಕಾರದ ಪ್ರಧಾನ ವೈಜ್ಞಾನಿಕ ಸಲಹೆಗಾರ ಅಜಯಕುಮಾರ ಸೂದ ಪಾಲ್ಗೊಳ್ಳಲಿದ್ದಾರೆ.

<><><>

ಕೇಂದ್ರದ, ಖೇಲೋ ಭಾರತ್ ನೀತಿ ಅನ್ವಯ, ಇನ್ನು ಮುಂದೆ ವಿದೇಶಗಳಲ್ಲಿ ನೆಲೆಸಿರುವ, ಭಾರತೀಯ ಮೂಲದ ಪ್ರತಿಭಾವಂತ ಕ್ರೀಡಾಪಟುಗಳು, ಅಂತಾರಾಷ್ಟ್ರೀಯ ಮಟ್ಟದಲ್ಲಿ, ಭಾರತವನ್ನು ಪ್ರತಿನಿಧಿಸಲು ಅವಕಾಶ ಲಭಿಸಲಿದೆ. ಬೇರೊಂದು ದೇಶದ ಪೌರತ್ವ (ಒ.ಸಿ.ಐ.) ಹೊಂದಿರುವ, ಭಾರತೀಯ ಮೂಲದವರು, ಭಾರತವನ್ನು ಪ್ರತಿನಿಧಿಸಲು, 2008 ರಲ್ಲಿ ನಿರ್ಬಂಧ ವಿಧಿಸಲಾಗಿತ್ತು. ಖೇಲೋ ಭಾರತ್ ನೀತಿ ಅನ್ವಯ, ದೇಶದ ಕ್ರೀಡಾ ವ್ಯವಸ್ಥೆ ಬಲಗೊಂಡು, ಜಾಗತಿಕ ಕ್ರೀಡಾ ಸಂಬಂಧಗಳನ್ನು ಹೆಚ್ಚಿಸುವ ಗುರಿ ಹೊಂದಿದೆ. ಈ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಹೆಚ್ಚಿನ ಮಾಹಿತಿ ನೀಡಿದ್ದಾರೆ, ಹಿರಿಯ ಕ್ರೀಡಾ ಪತ್ರಕರ್ತ, ಬೆಂಗಳೂರಿನ ಗಿರೀಶ ದೊಡ್ಡಮನಿ.

<><><>

ಗಿರೀಶ ದೊಡ್ಡಮನಿ ಧ್ವನಿ 55 ಸೆಕೆಂದುಗಳು

<><><>

ಒಲಿಂಪಿಕ್ಸ್ ಪದಕ ವಿಜೇತ, ಖ್ಯಾತ ಜಾವೆಲಿನ್ ಎಸೆತಗಾರ, ನೀರಜ್ ಚೋಪ್ರಾ ನಾಳೆಯಿಂದ ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಆಯೋಜಿತ, ನೀರಜ್ ಚೋಪ್ರಾ ಕ್ಲಾಸಿಕ್ ಜಾವೆಲಿನ್ ಸ್ಪರ್ಧೆಯಲ್ಲಿ ಭಾಗವಹಿಸಲಿದ್ದಾರೆ. ಅಂತಾರಾಷ್ಟ್ರೀಯ ಜಾವೆಲಿನ್ ಆಟಗಾರರಾದ ಜೂಲಿಯಸ್ ಯೆಗೊ ಮತ್ತು ಥಾಮಸ್ ರೋಹ್ಲರ್ ಸಹ ಭಾಗವಹಿಸಲಿದ್ದಾರೆ. ಗಾಯದ ಸಮಸ್ಯೆಯಿಂದಾಗಿ ಆಂಡರ್ಸನ್ ಪೀಟರ್ ಕಣದಿಂದ ಹಿಂದೆ ಸರೆದಿದ್ದಾರೆ. ನೀರಜ್ ಅವರು, ಬೆಂಗಳೂರನಲ್ಲಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ, ಸಮಾಲೋಚಿಸಿದರು.

<><><>

‘ಭವಿಷ್ಯವನ್ನು ಪ್ಲಾಸ್ಟಿಕ್ ಚೀಲಗಳಿಂದ ಮುಕ್ತಗೊಳಿಸಿ; ಮರು ಬಳಕೆ ಮಾಡಬಹುದಾದ ಪರ್ಯಾಯ ವಸ್ತು ಆಯ್ಕೆ ಮಾಡಿಕೊಳ್ಳಿ’ ಎಂಬ ಧ್ಯೇಯದೊಂದಿಗೆ, ಅಂತಾರಾಷ್ಟ್ರೀಯ ಪ್ಲಾಸ್ಟಿಕ್ ಚೀಲ ಮುಕ್ತ ದಿನ ಆಚರಿಸಲಾಯಿತು. ಏಕ ಬಳಕೆ ಪ್ಲಾಸ್ಟಿಕ್‌ನ್ನು ನಿಷೇಧಿಸುವ ಕುರಿತು ಜನರಲ್ಲಿ, ಜಾಗೃತಿ ಮೂಡಿಸಿ, ಜಲ ಮೂಲಗಳು ಕಲುಷಿತವಾಗುವುದನ್ನು ತಡೆದು, ಪರ್ಯಾಯವಾಗಿ ಪರಿಸರಸ್ನೇಹಿ ವಸ್ತುಗಳನ್ನು ಬಳಸುವಂತೆ, ಖ್ಯಾತ ಪರಿಸರವಾದಿ ಸುರೇಶ ಹೆಬ್ಳೀಕರ ಸೇರಿದಂತೆ, ಅನೇಕ ಪರಿಸರ ಆಸಕ್ತರು, ಮನವಿ ಮಾಡಿದ್ದಾರೆ. ಮನೆಯಿಂದಲೇ ಬಟ್ಟೆ ಚೀಲ ತೆಗೆದುಕೊಂಡು, ಮಾರುಕಟ್ಟೆಗೆ ಹೋಗುವಂತೆ, ಏಕಬಳಕೆ ಪ್ಲಾಸ್ಟಿಕ್ ಅನಿವಾರ್ಯವಾಗಿ ಬಳಸಿದ ನಂತರ, ಸಮರ್ಪಕವಾಗಿ ವಿಲೇವಾರಿ ಹಾಗೂ ಜಲಚರಗಳ ಆರೋಗ್ಯಕ್ಕೆ ತೊಂದರೆಯಾಗದಂತೆ ಬದ್ಧತೆಯಿಂದ ಬಳಸುವಂತೆ ಸಾರ್ವಜನಿಕರಲ್ಲಿ ಮನವಿ ಮಾಡಲಾಗಿದೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಕಲಬುರಗಿ ಜಿಲ್ಲೆ, ಚಿತ್ತಾಪುರ ತಾಲೂಕು ಪ್ರಜಾಸೌಧದ ಉದ್ಘಾಟನೆಯನ್ನು, ರಾಜ್ಯಸಭೆ ವಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ ಇಂದು ಬೆಳಗ್ಗೆ 11 ಗಂಟೆಗೆ, ನೆರವೇರಿಸಲಿದ್ದಾರೆ.

<><><>

ಧಾರವಾಡ, ಕರ್ನಾಟಕ ವಿದ್ಯಾವರ್ಧಕ ಸಂಘದ, ಶರಣಪ್ಪ ತೋಟಪ್ಪ ನಂದಿಬೇವೂರ ದತ್ತಿ ಅಂಗವಾಗಿ, ಮನೋಜ್ಞಾ ನಾಯಕ ಅವರಿಗೆ, 'ಯುವ ವಿಜ್ಞಾನಿ ಪ್ರಶಸ್ತಿ'ಯನ್ನು, ವಿಶ್ರಾಂತ ಉಪ ಕುಲಪತಿ ಕೆ.ಬಿ. ಗುಡಸಿ ನೀಡಿ, ಗೌರವಿಸಿದರು.

<><><>

ಶಿವಮೊಗ್ಗ ಜಿಲ್ಲೆ, ಶರಾವತಿ ಸಂತ್ರಸ್ತರಿಗೆ, ನ್ಯಾಯ ಒದಗಿಸಲು, ಅಡ್ವೊಕೇಟ್ ಜನರಲ್ ಅವರೊಂದಿಗೆ ಸಭೆ ನಡೆಸಿ, ಸಾವಿರದ 800ಕ್ಕೂ ಹೆಚ್ಚು ದಾಖಲೆಗಳನ್ನು ಸಲ್ಲಿಸಲಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ, ತಿಳಿಸಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಚಿಕ್ಕ ಮಕ್ಕಳಲ್ಲಿ ಹೃದಯಾಘಾತ; ಹುಬ್ಬಳ್ಳಿಯ ಕೆ.ಎಂ.ಸಿ., ಆರ್.ಐ. ವೈದ್ಯರಿಂದ ಮಹತ್ವದ ಸಂಶೋಧನೆ.
- ಒಣ ಮೆಣಸಿನಕಾಯಿ ಬೆಳೆದ, ರೈತರ ಹಿತಕಾಯಲು, ಬೆಂಬಲ ಬೆಲೆ ನಿಗದಿ ಪಡಿಸಿದ, ಸರ್ಕಾರ.
- ಇಂದು ಬೆಳಗಾವಿಯಲ್ಲಿ, ವಿಶ್ವೇಶ್ವರಾಯ ತಾಂತ್ರಿಕ ವಿಶ್ವವಿದ್ಯಾಲಯದ, 25ನೇ ಘಟಿಕೋತ್ಸವ.
- ಖೇಲೋ ಭಾರತ್ ನೀತಿ; ಅನಿವಾಸಿ ಭಾರತೀಯ ಕ್ರೀಡಾಪಟುಗಳು, ಭಾರತವನ್ನು ಪ್ರತಿನಿಧಿಸಲು, ಅವಕಾಶ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>